Nithyananda Dhyanapeetam

ಗೆ,
ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ
14ನೇ ಜನವರಿ 2014

ಮಾನ್ಯರೇ,

ವಿಷಯ: ಸಮಯ ಟಿವಿ ವಾಹಿನಿಯಿಂದ ಸುಳ್ಳು ಹಾಗೂ ದುರುದ್ದೇಶಪೂರಕ ಸುದ್ದಿ ಪ್ರಸಾರ

ಬಿಡದಿಯ ನಿತ್ಯಾನಂದ ಧ್ಯಾನಪೀಠದ ವಿರುದ್ಧ ಸಮಯ ಟಿವಿ ವಾಹಿನಿಯು 13ನೇ ಜನವರಿ 2014 (ಸೋಮವಾರ) ರಿಂದ ನಡೆಸಿದ ಸುಳ್ಳು ಹಾಗೂ ದುರುದ್ದೇಶಪೂರಕ ಸುದ್ದಿ ಪ್ರಸಾರದ ವಿಷಯವನ್ನು ತಮ್ಮ ಗಮನಕ್ಕೆ ತರುವ ಉದ್ದೇಶದಿಂದ ಈ ಪತ್ರವನ್ನು ಬರೆಯುತ್ತಿದ್ದೇವೆ.

ಈ ಮೂಲಕ ನಾವು ಸ್ಪಷ್ಟಪಡಿಸುವುದೇನೆಂದರೆ, ಯಾವುದೇ ಆಶ್ರಮವಾಸಿಯಾಗಲೀ, ಸಂನ್ಯಾಸಿಯಾಗಲೀ ಅಥವಾ ನಿತ್ಯಾನಂದ ಧ್ಯಾನಪೀಠದ ಪೀಠಾಧಿಪತಿಗಳಾದ ಪರಮಹಂಸ ನಿತ್ಯಾನಂದರೇ ಅಗಲೀ ಈ ಸುಂದರ ಕರ್ನಾಟಕ ರಾಜ್ಯದ (ಕನ್ನಡ ನಾಡಿನ) ಅಥವಾ ಕನ್ನಡ ಜನತೆಯ ಅಥವಾ ಈ ನಾಡಿನ ಸಂಸ್ಕೃತಿಯ ಬಗ್ಗೆ ಯಾವುದೇ ಅವಮಾನಕರ (ಅವಹೇಳನಕಾರಿ) ಮಾತನ್ನಾಡಿಲ್ಲವೆನೂ ಹಾಗೂ ಅವಮಾನಕರ ರೀತಿಯಲ್ಲಿ ನಡೆದುಕೊಂಡಿಲ್ಲವೆಂದು. ಕರ್ನಾಟಕದ ಅದ್ಭುತ ಸಂಸ್ಕೃತಿಯ ಮಧ್ಯೆ ಬಾಳುವ ಸೌಭಾಗ್ಯ ನಮ್ಮದಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇವೆ, ಹಾಗೂ ಇದಕ್ಕಾಗಿ ಕೃತಜ್ಞರೂ ಆಗಿರುತ್ತೇವೆ. ನಾವು ಪ್ರೀತ್ಯಾದರಗಳ ಭಾವದಿಂದ ಕರ್ನಾಟಕದ ಜನತೆ ಮತ್ತು ಸಂಸ್ಕೃತಿಯ ಸೇವೆಯನ್ನು ಎಂದೂ ಮಾಡಿರುತ್ತೇವೆ, ಹಾಗೂ ಮಾಡಲು ಮುಂದುವರೆಸುತ್ತೇವೆ.

ಆದರೆ, ದುರದೃಷ್ಟವಶಾತ್ ಕೆಲವು ಸಮಾಜ–ವಿರೋಧಿಗಳು ಯಾವುದೋ ಸ್ವಾರ್ಥ ಹಾಗೂ ಸ್ವಹಿತಾಸಕ್ತಿಯ ಕಾರಣಗಳಿಂದ ನಮ್ಮನ್ನು ಹಾಗೂ ನಮ್ಮ ಆತ್ಮಗುರುಗಳಾದ ಪರಮಹಂಸ ನಿತ್ಯಾನಂದರನ್ನು ಕುರಿತು ಮಾನನಷ್ಟ ಮಾಡುವ ಸಲುವಾಗಿ ಸಂಪೂರ್ಣವಾಗಿ ಸುಳ್ಳಿನ ವಿವಾದಗಳನ್ನು ಹುಟ್ಟಿಸುವ ಪ್ರಯತ್ನವನ್ನು ಮಾಡುತ್ತಾ ಬಂದಿರುತ್ತಾರೆ. ಸಮಯ ಟಿವಿ ವಾಹಿನಿಯಲ್ಲಿ ಸುದ್ದಿಯ ಹೆಸರಿನಲ್ಲಿ ಪ್ರಸಾರವಗುತ್ತಿರುವ – ಆಶ್ರಮವಾಸಿಗಳು ವಾಸವಾಗಿರುವ ಹೋಟೆಲಿನಲ್ಲಿ ಒಬ್ಬ "ಕನ್ನಡಿಗ"ನಿಗೆ ಪ್ರವೇಶ ನಿಷೇಧಿಸಲಾಯಿತೆನ್ನುವ ವಿಷಯವು ಸಂಪೂರ್ಣವಾಗಿ ಸುಳ್ಳು ಹಾಗೂ ಇದು ಕರ್ನಾಟಕದ ಜನರಿಗೆ ಹಾದಿತಪ್ಪಿಸುವಂತಹುದಾಗಿರುತ್ತದೆ. ತಮ್ಮ ಕಛೇರಿಯಲ್ಲಿ ಈ ವಿಷಯವನ್ನು ಸವಿನಯದಿಂದ ದಾಖಲಿಸಲು ಇಚ್ಛಿಸುತ್ತೇವೆ ಹಾಗೂ ಈ ವಿಷಯದ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ, ಹಾಗೂ ಜನಸಾಮಾನ್ಯರಿಗೆ ಈ ವಿಷಯದ ಕುರಿತು ಸ್ಪಷ್ಟನೆ ನಿಡಬೇಕೆನ್ನುವುದು ನಮ್ಮ ಸವಿಅಯ ಪ್ರಾರ್ಥನೆ.

ಧನ್ಯವಾದಗಳು,

ಇಂತಿ ನಿಮ್ಮ ವಿಶ್ವಾಸಿ,

ಸಾಯಿರಾಮ್ ಮುತ್ತುಸ್ವಾಮಿ

Nithyananda Dhyanapeetam, Nithyanandapuri, Off Mysore Road, Bidadi - 562 109, Bengaluru, INDIA
Contact: 091 97422 03311, 080 27202084 | E-mail: mail@nithyananda.org | URL: www.nithyananda.org